ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/69/2014-15/ ದಿನಾಂಕ: 26-05-2016

**ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,**

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀಮತಿ ಲಂಬಾಣಿ ಸೇವಿಬಾಯಿ<br>ಗಂಡ ಲೇಟ್ ಲಂಬಾಣಿ ರೆಡ್ಡಿನಾಯ್ಕ<br>ಕೊಮಾರನಹಳ್ಳಿತಾಂಡ,<br>(ಶ್ರೀ ಹೆಚ್.ನಾಗೇಶ್, ವಕೀಲರು ಹಡಗಲಿ)** | **ಗುಂಡುರಾವ್‌ನಾಯ್ಕ ತಂದೆ ಲೇಟ್ ಹೀರ್‍ಯಾನಾಯ್ಕ<br>ಬಂಗಾರಿನಾಯ್ಕ<br>ಕೊಮಾರನಹಳ್ಳಿತಾಂಡ,** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ನಾಗತಿಬಸಾಪುರ** | **283/ಎ** | **4.10** |
| | **400** | **5.00** |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನುಗಳು ಲಂಬಾಣಿ ರೆಡ್ಡಿನಾಯ್ಕ ತಂದೆ ಹೀರ್‍ಯಾನಾಯ್ಕ ರವರ ಹೆಸರಿಗೆ ಪಹಣಿ ಪಟ್ಟಾ ಇದ್ದು, ಸದರಿ ಪಟ್ಟಾದಾರರು ದಿನಾಂಕ 17-11-2014 ರಂದು ಮರಣ ಹೊಂದಿದ್ದು, ಅವರ ಮರಣದ ನಂತರ ಅವರ ವಾರಸುದಾರಳಾದ ಪತ್ನಿ ಶ್ರೀಮತಿ ಸೇವಿಬಾಯಿ ರವರು ದಿನಾಂಕ 13-05-2015ರಂದು ಪೋತಿವಾರಸ ಪ್ರಕಾರ ತನ್ನ ಹೆಸರಿಗೆ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾವ ಲೆಕ್ಕಾಧಿಕಾರಿಗಳು ನಾಗತಿಬಸಾಪುರ ರವರು ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 10-03-2015ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿರವರು ಎಂ.ಆರ್.ನಂ: ಹೆಚ್75/2014-15 ದಿನಾಂಕ 23-02-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 16-04-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳು ತಮ್ಮ ಪತಿಯಾದ ಶ್ರೀ ಲಂಬಾಣಿ ರೆಡ್ಡಿನಾಯ್ಕ ತಂದೆ ಹೀರ್‍ಯಾನಾಯ್ಕರವರ ಹೆಸರಿಗೆ ನಾಗತಿಬಸಾಪುರ ಗ್ರಾಮದ ಸ.ನಂ. 283/ಎ ವಿಸ್ತೀರ್ಣ 4.10 ಎಕರೆ ಜಮೀನು ಹಾಗೂ ಸ.ನಂ. 400 ವಿಸ್ತೀರ್ಣ 5.00 ಎಕರೆ ಜಮೀನುಗಳ ಪಹಣಿ ಪಟ್ಟಾ ಇದ್ದು, ಅವರು ದಿನಾಂಕ 17-11-2014ರಂದು ಮೃತಪಟ್ಟಿರುತ್ತಾರೆ. ಅವರ ತರುವಾಯ ಅವರ ಪತ್ನಿಯಾದ ನಾನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಆದರೆ, ಪ್ರತಿವಾದಿಗಳು ಈ ಜಮೀನುಗಳಿಗೆ ಯಾವುದೇ ಹಕ್ಕು ಇರುವುದಿಲ್ಲ. ಅವರು ಸಲ್ಲಿಸಿದ ತಕರಾರಿನಲ್ಲಿ ಸತ್ಯಾಂಶವಿರುವುದಿಲ್ಲ. ಆದ್ದರಿಂದ ಅವರ ಮನವಿಯನ್ನು ತಳ್ಳಿಹಾಕಿ ತನ್ನ ಹೆಸರಿಗೆ ಪೋತಿವಾರಸ ಪ್ರಕಾರ ಹಕ್ಕು ಬದಲಾವಣೆ ಮಾಡುವಂತೆ ಕೋರಿ ಮನವಿ ಮಾಡಿಕೊಂಡಿರುತ್ತಾರೆ.

ವಾದಿಗಳ ಪರ ನ್ಯಾಯವಾದಿಗಳು ನಾಗತಿಬಸಾಪುರ ಗ್ರಾಮದ ಸ.ನಂ. 283/ಎ ವಿಸ್ತೀರ್ಣ 4.10 ಎಕರೆ ಹಾಗೂ ಸ.ನಂ. 400 ವಿಸ್ತೀರ್ಣ 5.00 ಎಕರೆ ಜಮೀನುಗಳ ಪಹಣಿ ಪಟ್ಟಾ ಇದ್ದು, ಅವರು ದಿನಾಂಕ 17-11-2014ರಂದು ಮೃತಪಟ್ಟಿರುತ್ತಾರೆ. ಅವರ ಮರಣ ತರುವಾಯ ಅವರ ಏಕೈಕ ಪತ್ನಿಯಾದ ಶ್ರೀಮತಿ ಸೇವಿಬಾಯಿ ವಾರಸುದಾರಳಾಗಿರುವುದರಿಂದ ಅವರು ಪೋತಿವಾರಸ ಪ್ರಕಾರ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ಎದುರುದಾರರು ಈಆಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇರದೇ ಇದ್ದರೂ ಸುಳ್ಳು ತಕರಾರು ಸಲ್ಲಿಸಿದ್ದು ತಕರಾರಿನಲ್ಲಿಯ ಸಂಗತಿಗಳು ಸತ್ಯಕ್ಕೆ ದೂರವಾಗಿರುತ್ತದೆ ಮತ್ತು ಕಾನೂನಿನ ಅಡಿಯಲ್ಲಿ ಊರ್ಜಿವಾಗುವುದಿಲ್ಲವೆಂದು ತಿಳಿಸಿ ಅವರ ತಕರಾರು ಅರ್ಜಿಯನ್ನು ತಿರಸ್ಕರಿಸಿ, ವಾದಿಯ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿ ಲಿಖಿತವಾದವನ್ನು ಮಂಡಿಸಿರುತ್ತಾರೆ.

ಪ್ರತಿವಾದಿಗಳು ವಿಚಾರಣೆಗೆ ಸತತವಾಗಿ ಗೈರು ಹಾಜರಾಗಿರುತ್ತಾರೆ. ಅವರು ನೀಡಿದ ತಕರಾರಿಗೆ ಯಾವುದೇ ಪೂರಕ ದಾಖಲೆಗಳು ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅವರು ನೀಡಿದ ಆಕ್ಷೇಪಣಾ ಅರ್ಜಿಯನ್ನು ಪರಿಶೀಲಿಸಲಾಗಿ, ನಾಗತಿಬಸಾಪುರ ಗ್ರಾಮದ ಸ.ನಂ. 369, 400, 283ಎ, 341ಸಿ/2, 525ಬಿ/2ಡಿ, 276/ಎ, 369/ಎ, 346ಎ/2, 534ಬಿ/2 ಮತ್ತು 487ಬಿ ಈ ಎಲ್ಲಾ ಸ.ನಂ.ಗಳ ಪಹಣಿಯಲ್ಲಿ ಹಕ್ಕುಬದಲಾವಣೆ ಮಾಡಬಾರದು ಎಂದು ಕೇಳಿಕೊಂಡಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ಹಾಗೂ ಅವರಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ತಕರಾರುದಾರರು ಈ ಮೇಲಿನ ದಾವಾ ಜಮೀನಿನಲ್ಲಿ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದು ಎಂದು ಕೋರಿರುತ್ತಾರೆ. ಆದರೆ, ಈ ನ್ಯಾಯಾಲಯಕ್ಕೆ ಅವರು ಸತತವಾಗಿ ಗೈರು ಹಾಜರಾಗಿದ್ದು, ಅವರು ಯಾವುದೇ ಪೂರಕ ದಾಖಲೆ ನೀಡಿರುವುದಿಲ್ಲ ಮತ್ತು ವಾದಿಗಳ ಹೆಸರಿಗೆ ತನ್ನ ಪತಿಯ ಹೆಸರಿನಲ್ಲಿದ್ದ ಜಮೀನನ್ನು ಅವರ ಮರಣದ ನಂತರ ಅವರು ವಾರಸುದಾರರಾಗಿರುವುದರಿಂದ ಪೋತಿ ಹಕ್ಕು ವಾರಸು ಪ್ರಕಾರ ಹಕ್ಕು ಬದಲಾವಣೆ ಕೋರಿರುವುದು ಸಮಂಜಸವಿರುವುದರಿಂದ ತಕರಾರು ನೀಡಿದ ಹೇಳಿಕೆಯನ್ನು ತಿರಸ್ಕರಿಸಿ, ವಾದಿಯ ಹೆಸರಿಗೆ ಪೋತಿವಾರಸ ಪ್ರಕಾರ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ಪ್ರತಿವಾದಿಗಳು ತಾವು ನೀಡಿದ ಆಕ್ಷೇಪಣೆಯನ್ನು ತಿರಸ್ಕರಿಸಿದೆ. ಪೋತಿವಾರಸ ಪ್ರಕಾರ ನಾಗತಿಬಸಾಪುರ ಗ್ರಾಮದ ಸ.ನಂ. 283/ಎ ವಿಸ್ತೀರ್ಣ 4.10 ಎಕರೆ ಹಾಗೂ ಸ.ನಂ. 400 ವಿಸ್ತೀರ್ಣ 5.00 ಎಕರೆ ಜಮೀನುಗಳನ್ನು ವಾದಿಯಾದ ಶ್ರೀಮತಿ ಲಂಬಾಣಿ ಸೇವಿಬಾಯಿ ಗಂಡ ಲೇಟ್ ಲಂಬಾಣಿ ರೆಡ್ಡಿನಾಯ್ಕ ರವರ ಹೆಸರಿಗೆ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಪ್ರತಿವಾದಿಗಳು ಬಾದಿತರಾದಲ್ಲಿ ತಮ್ಮ ಹಕ್ಕು ಮತ್ತು ಹಿತಾಸಕ್ತಿಯನ್ನು ಉನ್ನತ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.